ಶ್ರೀ ಮಂಜಪ್ಪ ಉಳ್ಳಾರ್.—ಪೋಲೀಸು ಸ್ಪೋರ್ಟ್ಸುಗಳನ್ನು ಡಿಪಾರ್ಟ್‌ಮೆಂಟಿನವರು ಸಾರ್ವಜನಿಕರ ಸಹಾಯ ಪಡೆದು ಮಾಡುತ್ತಾರೆಂದು ತಿಳಿಸಿದ್ದೀರಿ. ಆದರೆ ಇಲ್ಲಿ ಕೊಟ್ಟಿರುವ ಉತ್ತರದಲ್ಲಿ 57 ನೆಯ ಇನಪಯಲ್ಲಿ ಸ್ಪೋರ್ಟುಗಳಲ್ಲಿ ಭಾಗವಹಿಸಲು ಬಜಾಪುರದಲ್ಲಿ ಸಾರ್ವಜನಿಕರಿಗೆ ಆಮಂತ್ರಣವನ್ನು ಕೊಟ್ಟಿಲ್ಲವೆಂದು ಹೇಳಲಾಗಿದೆ. ಇದಕ್ಕೇನು ಕಾರಣ?

†ಶ್ರೀ ಬಿ. ಬನವಲಂಗಪ್ಪ.—ಕಾರಣವನ್ನು ತಿಳಿಸುವುದಕ್ಕೆ ಆಗುವುದಿಲ್ಲ.

ಶ್ರೀ ಮಂಜಪ್ಪ ಉಳ್ಳಾರ್.—ಪೋಲೀಸು ಸ್ಪೋರ್ಟ್ಸ್ ಬರಿಯಕೆಳದರ್ಜೆಯವರಿಗಾಗಿ ಮಾಡಿದ್ದಾರೆಂದು ತೋರುತ್ತದೆ. ಡಿ.ಎಸ್.ಪಿ., ಡಿ.ವೈ.ಎಸ್.ಪಿ., ಸಬ್ ಇನ್‌ಸ್ಪೆಕ್ಟರ್ ಇತ್ಯಾದಿ ಅಧಿಕಾರಿಗಳು ಇದರಲ್ಲಿ ಭಾಗವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ!

ಶ್ರೀ ಬಿ. ಬನವಲಂಗಪ್ಪ.—ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಕೂಡ ಪೋಲೀಸ್ ಸ್ಪೋರ್ಟುಗಳು ಪ್ರತಿವರ್ಷವೂ ಆಗುತ್ತಿವೆ ಮತ್ತು ಇದರಲ್ಲಿ ಎಲ್ಲ ಅಧಿಕಾರಿಗಳೂ ಭಾಗವಹಿಸುತ್ತಾರೆ.

ಶ್ರೀ ಮಂಜಪ್ಪ ಉಳ್ಳಾರ್.—ಇದರಲ್ಲಿ (ಬ) ಗೆ ಉತ್ತರವಾಗಿ ಅಂಕಿಗಳನ್ನು ಕೊಟ್ಟಿರುವುದರಲ್ಲಿ ವ್ಯತ್ಯಾಸಗಳಿವೆ. ಈ ರೀತಿಯಾಗಿ ಮಾಡದೆ ಸರಾಸರಿಯಾಗಿ ಇವುಗಳನ್ನು ಹಂಚುವುದಕ್ಕೆ ಆಗುವುದಿಲ್ಲವೇ!

ಶ್ರೀ ಬಿ. ಬನವಲಂಗಪ್ಪ.—ತಾವು ಹೇಳಿದ ಅಭಿಪ್ರಾಯವನ್ನೂ ಗಮನದಲ್ಲಿ ಇಟ್ಟುಕೊಂಡು ಮುಂದೆ ಮಾಡಬಹುದು.

Sri J. B. MALLARADHYA.—What is the source out of which these funds are made for the expenditure of sports?

Sri B. BASAVALINGAPPA.—Police.

Sri J. B. MALLARADHYA.—I want to know whether it is a government grant out of which this expenditure is met.

Sri B. BASAVALINGAPPA.—Out of Government grant.

Sri J. B. MALLARADHYA.—Is this kind of grant given to other departments when conducting sports?

Sri B. BASAVALINGAPPA.—My friend knows, I have been conducting sports during the Dasara festivities.

Sri J. B. MALLARADHYA.—My question is: Just as they are providing funds from government for encouragement of sports in the Police Department, are they giving similar grants to other departments where sports can be conducted?

Sri B. BASAVALINGAPPA.—I understand the opinion of my learned friend. I think the Government is actively considering the setting up of the Sports Councils. I think he will be satisfied with it.

ಶ್ರೀ ಮಂಜಪ್ಪ ಉಳ್ಳಾರ್.—ಪೋಲೀಸ್ ಸ್ಪೋರ್ಟ್ಸ್‌ನ್ನು ಮಾಡುವ ಉದ್ದೇಶವೇನು? ಇದಕ್ಕೆ ಕೇಂದ್ರ ಸರ್ಕಾರದವರು ಏನಾದರೂ ಸಹಾಯ ಕೊಡುತ್ತಾರೆಯೇ!

ಶ್ರೀ ಬಿ. ಬನವಲಂಗಪ್ಪ.—ಸಹಾಯ ಕೊಡುತ್ತಿಲ್ಲ.

ಶ್ರೀ ಮಂಜಪ್ಪ ಉಳ್ಳಾರ್.—ಒಂದೊಂದು ಜಿಲ್ಲೆಗೆ ಎಷ್ಟೆಷ್ಟು ಹಣ ಕೊಡಬೇಕು ಮತ್ತು ಖರ್ಚು ಮಾಡಬೇಕೆನ್ನುವುದಕ್ಕೆ ಒಂದು ನಿಗದಿಯಾದ ಕಾರ್ಯಕ್ರಮ ವ್ಯವಸ್ಥೆ ಇದೆಯೇ?

ಶ್ರೀ ಬಿ. ಬನವಲಂಗಪ್ಪ.—ಪ್ರತಿಯೊಂದು ಜಿಲ್ಲೆಯಲ್ಲಿಯೂ ಪೋಲೀಸು ಸ್ಪೋರ್ಟ್ಸನ್ನು ಮಾಡುವುದಕ್ಕೆ ನಿಗದಿಯಾದ ವ್ಯವಸ್ಥೆ ಇದೆ. ಅದಕ್ಕೆ ಬೇಕಾಗಿರುವಷ್ಟು ಹಣವನ್ನು ಒದಗಿಸುತ್ತೇವೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಶಾ.—ಬಿಜಾಪುರ ಜಿಲ್ಲೆಯಲ್ಲಿ ಪೋಲೀಸು ಸ್ಪೋರ್ಟ್ಸ್ ಮಾಡುವುದಕ್ಕೆ ಕಳೆದ ವರ್ಷಗಳಲ್ಲಿ ಸರಿಯಾದ ವ್ಯವಸ್ಥೆ ಮಾಡಲಿಲ್ಲ. ಮುಂದಿನ ವರ್ಷ ಸರಿಯಾದ ವ್ಯವಸ್ಥೆ ಮಾಡುತ್ತೀರೋ!

ಶ್ರೀ ಬಿ. ಬನವಲಂಗಪ್ಪ.—ಸರಿಯಾದ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎನ್. ನುಬ್ಬಯ್ಯ ನಾಯಕ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1957ರಲ್ಲಿ 169ರೂಪಾಯಿ, 1958ರಲ್ಲಿ ರೂ. 299-80 ವೆಚ್ಚವಾಗಿದೆ. ಈ ಜಿಲ್ಲೆಗೆ ಬಹಳ ಕಡಮೆ ಖರ್ಚಾಗಿದೆ. ಹೇಗಾಗದಂತೆ ನೋಡಿಕೊಳ್ಳುತ್ತೀರಾ?

ಶ್ರೀ ಬಿ. ಬನವಲಂಗಪ್ಪ.—ಇದು ಆಯಾ ಜಿಲ್ಲೆಯ ಉತ್ಸುಕತೆಯ ಮೇಲೆ ಇರುತ್ತದೆ. ಅಲ್ಲಿಯವರು ಉತ್ಸುಕರಾಗಿ ಮಾಡುವುದಕ್ಕೆ ಮುಂದೆ ಬಂದಿಲ್ಲ. ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಡಾ॥ ಟಿ. ಪಾರ್ಥಸಾರಥಿ.—ಅಸೆಂಬ್ಲಿಯವರು ಗಳಿಗೆ ಸ್ಪೋರ್ಟ್ಸ್ ಅರೇಂಜ್ ಮಾಡುತ್ತೀರ? (*Laughter.*)

(*No reply*)

Youth Clubs, Farmers' Clubs and Mahila Sanghas in South Kanara District.

*Q.—553. Sri MANJAPPA ULLAL (Karkal).—

Will the Government be pleased to state:—

(*a*) the number of Youth Clubs, Farmers' Clubs and Mahila Sanghas opened so far in South Kanara District under N.E.S. Scheme (separate figures may be furnished);

(*b*) whether they are giving any grants to them?

4.—Sri H. C. LINGA REDDY (Deputy Minister for Planning and Development).—

(a) Youth Clubs	...	122
Farmers' Clubs	...	74
Mahila Sanghas	...	65

(b) Yes. Generally grants are given subject to availability of funds in the respective schematic budgets.

ಶ್ರೀ ಮಂಜಪ್ಪ ಉಳ್ಳಾರ್.—ಈ ಸಂಘಗಳು ರಾಷ್ಟ್ರಾಭಿವೃದ್ಧಿ ಕಾರ್ಯಗಳಲ್ಲಿ ಯಾವ ರೀತಿಯಲ್ಲಿ ಸಹಾಯವಾಗುತ್ತವೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಎನ್.ಇ.ಎಸ್. ಬ್ಲಾಕುಗಳಲ್ಲಿ ಈ ಸಂಘಗಳು ವ್ಯವಸಾಯದ ಕಾರ್ಯಕ್ರಮಗಳನ್ನೂ, ಸ್ಪೋರ್ಟ್ಸ್ ಕಾರ್ಯಕ್ರಮಗಳನ್ನೂ, ಪ್ರಚಾರೋಪನ್ಯಾಸ ಕಾರ್ಯಕ್ರಮಗಳನ್ನೂ ಮತ್ತು ಇನ್ನೂ ಅನೇಕ ವಿಧವಾದ ಕಾರ್ಯಕ್ರಮಗಳನ್ನೂ ಇಟ್ಟು ಕೊಂಡಿವೆ. ಮಹಿಳಾ ಸಂಘಗಳು ನಿಟ್ಟಿಂಗ್, ಡೊಮೆಸ್ಟಿಕ್ ಇಂಡಸ್ಟ್ರೀಸ್, ಸಂಗೀತ ಮತ್ತು ಮಹಿಳೆಯರಿಗೆ ಬೇಕಾದ ಅನೇಕ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಚೆನ್ನಾಗಿ ಕೆಲಸ ನಡೆಸುತ್ತಿವೆ.

ಶ್ರೀ ಮಂಜಪ್ಪ ಉಳ್ಳಾರ್.—ಈ ಎಲ್ಲಾ ಸಂಘಗಳಲ್ಲಿಯೂ ಏನಾದರೂ ಸಮಾಜ ಅಭಿವೃದ್ಧಿ ಕಾರ್ಯಗಳಲ್ಲಿ ಸರಿಯಾದ ಟ್ರೇನಿಂಗ್ ಕೊಡುವಾಗುತ್ತಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅವರಿಗೆ ಅನೇಕ ವಿಧವಾದ ಟ್ರೇನಿಂಗ್ ಜೀವನ ರಂಗದಲ್ಲಿಯೇ ಆಗಿರುತ್ತದೆ. ಇಂಥದೇ ಶಿಕ್ಷಣ ಆಗಬೇಕೆಂದಿಲ್ಲ.

ಶ್ರೀ ಮಂಜಪ್ಪ ಉಳ್ಳಾರ್.—ಉತ್ತರದಲ್ಲಿ ಕೊಟ್ಟಿರುವ ಯುವಕರ ಸಂಘಗಳೂ, ರೈತರ ಸಂಘಗಳೂ, ಮಹಿಳಾ ಸಂಘಗಳೂ ರಿಜಿಸ್ಟರ್ ಆಗಿವೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನೋಟೀಸ್ ಬೇಕು.

Sri C. J. MUCKANNAPPA.—May I know the principle followed in making grants to the various youth clubs, farmers club and Mahila Sangh?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಪ್ರತಿಯೊಂದು ಬ್ಲಾಕಿನಲ್ಲಿಯೂ ಸಮಾಜ ಅಭಿವೃದ್ಧಿ ಕಾರ್ಯಕ್ಕೆ, ವಿದ್ಯಾಭ್ಯಾಸಕ್ಕೆ 40 ಸಾವಿರ ರೂಪಾಯಿ ಇಟ್ಟು ಕೊಂಡಿದ್ದಾರೆ. ಬ್ಲಾಕ್ ಡೆವಲಪ್‌ಮೆಂಟ್ ಅಡ್ವೈಸರಿ ಕಮಿಟಿಯವರೂ, ಆಫೀಸಿನವರೂ, ಸಂಘಗಳ ನೀಡಿಕೆಗಳು ಬೇಡಿಕೆಗಳು ಮತ್ತು ಅವಶ್ಯಕತೆಗಳನ್ನು ನೋಡಿ ಸ್ವಲ್ಪ ಹಣ ಕೊಡುತ್ತಾರೆ.

ಶ್ರೀಮತಿ ಬನವಾಜೇಶ್ವರಿ.—ಈ 65 ಮಹಿಳಾ ಸಂಘಗಳಿಗೆ ಎಜ್.ಇ.ಎಸ್. ಬ್ಲಾಕಿನಿಂದ ಗ್ರಾಂಟು ಕೊಡುತ್ತೀರೋ, ಸಮಾಜ ಕಲ್ಯಾಣ ಶಾಖೆಯಿಂದ ಕೊಡುತ್ತೀರೋ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎರಡು ಇಲಾಖೆಗಳಿಂದಲೂ ಗ್ರಾಂಟು ಸಿಕ್ಕುತ್ತದೆ.

ಶ್ರೀ ಕೆ. ಎರ್. ನರಸಿಂಹಯ್ಯ.—ಈ 122 ಯೂತ್ ಕ್ಲಬ್ಬುಗಳಲ್ಲಿ, ಗಂಡಸರೆಷ್ಟು, ಹೆಂಗಸರೆಷ್ಟು ಜನ ಇದ್ದಾರೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಯುವಕ ಸಂಘಗಳಲ್ಲಿ ಮಹಿಳೆಯರೂ ಸೇರುತ್ತಾರೆ.

ಶ್ರೀ ಮಂಜಪ್ಪ ಉಳ್ಳಾರ್.—ಗ್ರಾಮಗಳಲ್ಲಿರುವ ಜನರು ಸೌಖ್ಯವಾಗಿಲ್ಲದಿದ್ದರೆ, ಅವರನ್ನು ಆಸ್ಪತ್ರೆಗೆ ಸೇರಿಸುವುದಕ್ಕೆ, ಮುಂತಾದುವಕ್ಕೆ ಏನು ಕ್ರಮ ಇಟ್ಟುಕೊಂಡಿದ್ದಾರೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ವ್ಯಾನ್ ಕೊಡುವ ಅರೇಂಜ್‌ಮೆಂಟನ್ನು ಎನ್.ಇ.ಎಸ್. ಬ್ಲಾಕಿನವರು ಮಾಡುತ್ತಾರೆ. ಆಯಾ ಮಹಿಳಾ ಸಮಾಜದವರು ನೂಕ್ತಕಾರ್ಯಕ್ರಮವನ್ನು ಕೈಗೊಳ್ಳಬಹುದು; ಅದಕ್ಕೆ ಅಡ್ಡಿ ಏನೂ ಇಲ್ಲ.

Sri C. M. ARUMUGHAM.—May I know the programmes of these clubs, Sir?

Sri H. C. LINGA REDDY.—Hon'ble Member himself is a youth. Therefore he knows the activities of the Youth Club.

Sri C. K. RAJAIAH SETTY.—Please let us know what the programme and functions of those clubs are.

Sri H. C. LINGA REDDY.—The Youth Clubs carry out the sports activities and other educational activities, tour activities cultural and social activities.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ 74 ಫಾರ್ಮರ್ಸ್ ಕ್ಲಬ್ಬುಗಳು ಸ್ಥಾಪನೆಯಾದ ಮೇಲೆ, ಇವುಗಳ ಮುಖಾಂತರ ವ್ಯವಸಾಯದ ಸುಧಾರಣೆ ಯಾಗಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಬೇಕಾದಷ್ಟು ಮಾಡಿದ್ದಾರೆ. ಗುಬ್ಬಿ ಮತ್ತು ಚಂದ್ರಶೇಖರಪುರ ಕ್ಷೇತ್ರಗಳಲ್ಲಿ ಈ ವ್ಯವಸಾಯದ ಕ್ಲಬ್ಬಿನವರು ಬಹಳ ಚೆನ್ನಾಗಿ ಕ್ಲಬ್ಬನ್ನು ಏರ್ಪಾಡು ಮಾಡಿಕೊಂಡು, ಕಬ್ಬಿನ್ ಗಾರ್ಡನ್ನುಗಳನ್ನು, ಜಪಾನೀಸ್ ಮೆಥಡ್ ಆಫ್ ಪ್ಯಾಡಿ ಕಲ್ಟಿವೇಷನ್, improved methods of cultivation, ಮುಂತಾದುವನ್ನು ತಾವು ಮಾಡುವುದಲ್ಲದೆ, ಬೇರೆಯವರಲ್ಲಿಯೂ ಈ ವಿಷಯದಲ್ಲಿ ಪ್ರಚಾರ ಮಾಡಿ ಬಹಳ ಕೆಲಸ ಮಾಡುತ್ತಾ ಇದ್ದಾರೆ.

Sri J. B. MALLARADHYA.—Are these grants subject to any conditions or rules, or does it only depend on the whims and fancies of the people who grant this?

Sri H. C. LINGA REDDY.—It all depends upon the necessity and also the availability of funds and also the use.

Sri J. B. MALLARADHYA.—Have they framed rules under which these grants are administered?

Sri H. C. LINGA REDDY.—We have left it to the discretion of the Block Development Officer.

ಶ್ರೀ ಎಂ. ಕೆ. ಬೊಮ್ಮೇಗೌಡ.—ರೈತರ ಸಂಘಗಳಲ್ಲಿ ಏನು ಕೆಲಸ ಮಾಡುತ್ತಾರೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ರೈತರ ಕೆಲಸ ಮಾಡುತ್ತಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ರೈತರು ಸಂಘಗಳಲ್ಲಿ ಮೆಂಬರಾಗಿರಬೇಕಾದರೆ ಕ್ವಾಲಿಫಿಕೇಷನ್ ಏನಿರಬೇಕು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ರೈತರಾಗಿರಬೇಕು.

ಶ್ರೀ ಎಂ. ಕೆ. ಬೊಮ್ಮೇಗೌಡ.—ರೈತರಾಗಿ ಇಲ್ಲದೆ ಇದ್ದವರು, ರೈತ ಸಂಘಗಳ ಮೆಂಬರಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೆಂಬರಲ್ಲದವರು ಸೇರಿದರೆ, ಅವರೂ ಆಮೇಲೆ ರೈತರಾಗಬಹುದು.

ಶ್ರೀ ಎಚ್. ಎ. ವೀರೇಗೌಡ.—ಈ ಮಹಿಳಾ ಸಂಘದ ಸೇವಕಿಯರಿಂದ ನಿಮ್ಮಿಂದ ನಿಯಮಿತ ಪಾದಂಥ ಕಾರ್ಯವಾಗುತ್ತಿಲ್ಲ, ಮಹಿಳಾ ವಿಭಾಗಕ್ಕೆ ಅವರಿಂದ ಯಾವ ವಿಧವಾದ ಪ್ರಯೋಜನವೂ ಆಗುತ್ತಿಲ್ಲ, ಅವರನ್ನು ಯಾವ ಉದ್ದೇಶಕ್ಕೋಸ್ಕರ ನೇಮಕ ಮಾಡಿದರೋ, ಆ ಉದ್ದೇಶ ಸಾಧನೆ ಅವರಿಂದ ಆಗುತ್ತಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಎಸ್. ಆರ್. ರಾಮಯ್ಯ.—ಈ ಸಂಘಗಳನ್ನು ಸ್ಥಾಪನೆ ಮಾಡುವುದಕ್ಕೆ ಇರುವ ನಿಬಂಧನೆಗಳನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆಯಾ ಸಂಘಗಳವರು ಕೆಲವರು ಬೈಲಾಗಳನ್ನು ಮಾಡಿಕೊಂಡಿರುತ್ತಾರೆ. ಆ ಕಾನೂನು ಪ್ರಕಾರ ಕೆಲಸವಾಗುತ್ತದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಮಹಿಳಾ ಸಂಘಗಳನ್ನು ಭೇಟಿ ಮಾಡಿ ಅವುಗಳ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೇ, ಏಪ್ಪರಮಟ್ಟಿಗೆ ನಡೆಯುತ್ತಿವೆ ಎನ್ನುವುದನ್ನು ಪರಿಶೀಲನೆ ಮಾಡುತ್ತೀರಲ್ಲವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ತಮ್ಮ ತಾಲ್ಲೂಕಿಗೆ ಬಂದಾಗ, ಒಂದು ಮಹಿಳಾ ಸಮಾಜಕ್ಕೆ ಕರೆದುಕೊಂಡು ಹೋಗಿ, ಕೆಲಸ ಚೆನ್ನಾಗಿ ನಡೆಯುತ್ತಿರುವುದನ್ನು ತೋರಿಸಿದರು. ಇನ್ನೂ ಅನೇಕ ಕಡೆಗಳಲ್ಲಿ ಹೋಗಿ ನೋಡಿದ್ದೇನೆ. ಕೆಲಸ ಚೆನ್ನಾಗಿ ನಡೆಯುತ್ತಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ನಮ್ಮ ತಾಲೂಕಿನಲ್ಲಿ ಸರಿಯಾಗಿದೆ. ಮಹಿಳೆಯರು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿದರು. ಅದಕ್ಕೋಸ್ಕರ ಹೇಳಿದೆ.

Financial Assistance to the Municipalities.

*Q. 566. Sri B. JAGAJJEEVANDAS SHETTY (Brahmavar).—Will the Government be pleased to state

(a) the financial assistance rendered to the various Municipalities in the Old Mysore area during the year 1957-58 and 1958-59 ;

(b) whether such assistance has been extended to the Municipalities or District Boards) in South Kanara District and if so, how much ;

(c) whether Government propose to give any *ad hoc* grants to relieve the acute financial stringency that prevails in the local bodies and municipalities of the District ?

Sri T. SUBRAMANYA (Minister for Law, Labour and Local Self-Government).—(a) *Vide* statement I. (Copy placed on the Table of the House).

(b) Yes, *vide* statement II. (Copy placed on the Table of the House).

[Placed in the Legislature Library No. 16/L.A./Bud. 59.]

(c) No.

Sri B. JAGAJJEEVANDAS SHETTY.—Will the Government be pleased to state whether they would make sufficient grants in advance to local bodies so that the municipal servants and officers are paid regularly in time ?

Sri J. AYYAVU DASHAMSUDDIN (Deputy Minister for Finance).—The grants are paid under a particular scheme and some times *ad hoc* grants are paid well in advance. They do not relate to disbursement of pay and allowances of officers employed by the local bodies.

Arrests in connection with the Breaking of Idol of Naviluswamy in Sandur Taluk.

*Q. 610. Sri M. M. J. SADYOJATHAPPAIAH (Harapanahalli).—Will the Government be pleased to state :—

(a) whether it is a fact that the Idol of Naviluswamy in Sandur Taluk, was broken by some persons ;

(b) whether it is a fact that some persons were arrested in this connection ;

(c) whether it is also a fact that the police have registered a case against them ;

(d) whether it is a fact that the case was withdrawn ?